**ಡಿಡಬ್ಲೂಃ 1** **ಅಸಲು ದಾವೆ ನಂ. 298/2014**

ದಿನಾಂಕ 03-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಸ್.ಬಿ.ಆರ್. 6 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಮತ್ತು ನನ್ನ ಸಹೋದರರು ಸೇರಿಕೊಂಡು 6 ನೇ ಪ್ರತಿವಾದಿಯ ಮೇಲೆ ಅಸಲು ದಾವಾ ಸಂಖ್ಯೆ 84/2000 ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿ. ಸದರಿ ಪ್ರಕರಣವನ್ನು ಎದುರಡಿಯನ್ನು ಬರೆದುಕೊಟ್ಟಿದ್ದರಿಂದ ನಾವು ದಾವೆಯನ್ನು ಸಲ್ಲಿಸಿದ್ದವೆ ಎಂದರೆ ಸರಿ. ಸದರಿ ಎದುರಡಿಯನ್ನು 6500 ರೂ.ಳಿಗೆ ಬರೆದುಕೊಟ್ಟಿದ್ದು ಮತ್ತು ಅದನ್ನು 5 ವರ್ಷದ ನಂತರ ಅಂದರೆ 10 ವರ್ಷದ ಒಳಗೆ ರೂ. 20 ಸಾವಿರ ಹಣವನ್ನು ವಾಪಸ್ಸು ಕೊಟ್ಟಾಗ ದಾವಾ ಅಸ್ತಿಯನ್ನು ಮರಳಿ ಕೊಡುತ್ತೇನೆಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನನ್ನ ವಿರುದ್ಧ ಆಸ್ತಿಯನ್ನು ಪರಭಾರೆ ಮಾಡಬಾರದು ಎಂದು ತಾಕಿತ್ತು ಮನಾಯಿ ಹುಕುಂ ಪಡೆದಿದ್ದರು ಎಂದರೆ ಸರಿ. ಆ ರೀತಿ ಆದೇಶ ಇದ್ದರು ಸಹಾ ನಾನು ದಾವಾ ಅಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆ ದಾವೆ ಇತ್ಯರ್ಥ ಅದ ದಿನಾಂಕ ನನಗೆ ನೆನಪು ಇಲ್ಲ. ದಿ. 04-11-2010 ರಂದು ಇತ್ಯರ್ಥ ಆಯಿತು ಎಂದರೆ ಸರಿ. ದಾವಾಐಟಂ. 1 ನೇ ಅಸ್ತಿಯನ್ನು ಮಾರಾಟ ಮಾಡಿದ್ದೆನೆಂದರೆ ಸಾಕ್ಷಿಯು ನನ್ನ ತಂದೆಯು ಖರೀದಿ ಮಾಡುವ ಸಮಯದಲ್ಲಿ ನನ್ನ ಅಕ್ಕನಿಗೆ ಕೊಡಬೇಕು ಎಂದು ಮಾತಾಗಿತ್ತು, ಆ ಮಾತಿನಂತೆ ನನ್ನ ತಂದೆಯ ಮರಣದ ನಂತರ ನಾನು ದಾವಾ ಅಸ್ತಿಯನ್ನು ನನ್ನ ಅಕ್ಕನಿಗೆ ಮಾರಾಟ ಮಾಡಿದ್ದೆನೆ ಎಂದು ನುಡಿಯುತ್ತಾರೆ.

ನಿಡಿ-9 ರಲ್ಲಿ ನಾನು ಈ ಮೇಲೆ ಹೆಳಿದ ವಿಚಾರವನ್ನು ಕ್ರಯ ಪತ್ರದಲ್ಲಿ ಹೇಳಿಲ್ಲ ನಾನು ಈ ಮೇಲೆ ಹೆಳಿದಂತೆ ತೋರಿಸಲು ಯಾವುದೇ ದಾಖಲೆಗಳು ಇಲ್ಲ. 6 ನೇ ಪ್ರತಿವಾದಿ ಡಿಂದ ಅಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷವನ್ನು ನುಡಿಯತ್ತಿದೇನೆ ಎಂದರೆ ಸರಿಯಲ್ಲ.

ದಾವಾ ಅಸ್ತಿಯಲ್ಲಿ ಕೋಳಿ ಪಾರಂ ಅನ್ನು ಯಾವ ವರ್ಷದಲ್ಲಿ ಕಟ್ಟಿದ್ದಾರೆ ಎಂದು ಗೊತಿಲ್ಲ. ಸದರಿ ಕೋಳಿ ಪಾರಂ ಅನ್ನು ನನ್ನ ತಂದೆಯ ಕಟ್ಟಿರುತ್ತಾರೆ. ಕೋಳಿ ಪಾರಂ.ನ ವಿಸ್ತಿರ್ಣ ವನ್ನು ನಾನು ಅಳತೆ ಮಾಡಿಲ್ಲ.

ನನಗೆ 40 ವರ್ಪ ವಯಸ್ಸು. ನಾನು ನೋಡಿದಂತೆ ದಾವಾ ಅಸ್ತಿಯು 22 ವರ್ಪಗಳಿಂದ ನಮ್ಮ ಸ್ವಾದೀನದಲ್ಲಿ ಇದೆ. ಆಂದರೆ ಆಗ ನನಗೆ ವಯಸ್ಸು 18 ವರ್ಪ ಅಗಿತ್ತು ಎಂದರೆ ಸಾಕ್ಷಿಯು 18 ವರ್ಪಕ್ಕಿಂತ ಕಡಿಮೆ ಇತ್ತು ಎಂದು ನುಡಿಯುತ್ತಾರೆ. ನಾನು ಚಿಕ್ಕವನು ಇದ್ದಾಗಲೆ ಸದರಿ ಕೋಳಿ ಪಾರಂ ಅನ್ನು ಕಟ್ಟಿದ್ದಾರೆ. ಕೋಳಿ ಪಾರಂ ಅನ್ನು 1991 ಕ್ಕಿಂತ ಮುಂಚೆ ಕಟ್ಟಿದ್ದಾರಾ ಎಂದರೆ ಸಾಕ್ಷಿಯು ನನಗೆ ನೆನಪು ಇಲ್ಲ ಎಂದು ನುಡಿಯುತ್ತಾರೆ.

ನಮ್ಮ ತಂದೆಯ ಮರಣದ ನಂತರ ನಾನು ದಾವಾ ಅಸ್ತಿಯಲ್ಲಿ ಕೋಳಿ ಗಳನ್ನು ಮೇಯಿಸಿದೆನೆ. 15 ವರ್ಪಗಳ ಹಿಂದೆ ನನ್ನ ಅಕ್ಕನಿಗೆ ಕೋಳಿ ಪಾರಂ ಅನ್ನು ಕೊಟ್ಟಿರುತ್ತೆವೆ ಆದಾದ ನಂತರ ನಾನು ಕೋಳಿ ಪಾರಂ ಹತ್ತಿರ ಹೋಗಿಲ್ಲ ಎಂದು ನುಡಿಯುತ್ತಾರೆ. 15 ವರ್ಪಗಳಿಂದ ನಾನು ಕೋಳಿ ಪಾರಂ ಹತ್ತಿರ ಹೂೕಗಿಲ್ಲ ಎಂದರೆ ಸಾಕ್ಕ್ರಿಯು ಹೋಗುತ್ತಿರುತ್ತೆನೆ ಅದರೆ ಕೋಳಿ ಪಾರಂ ನನ್ನ ಅಕ್ಕ ಸ್ವಾದೀನದಲ್ಲಿ ಇದೆ ಎಂದು ನುಡಿಯುತ್ತಾರೆ. ಕೊನೆಯ ಬಾರಿಗೆ ಅಂದರೆ 2-3 ತಿಂಗಳ ಹಿಂದೆ ನಾನು ಕೋಳಿ ಪಾರಂ ಹತ್ತಿರ ಹೋಗಿದ್ದೆ. ಆಗ ಕೋಳಿ ಮೇಯಿಸುತ್ತಿರಲಿಲ್ಲ.

ದಾವಾಅಸ್ತಿ ಐಟಂ. 1 ರಲ್ಲಿ ಕೋಳಿ ಪಾರಂ ಇದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ದಾವಾ ಅಸ್ತಿ ಐಟಂ. ನಂ. 1 ರಲ್ಲಿ ಕೋಳಿ ಪಾರಂ ಇಲ್ಲ. ಅದ್ದರಿಂದ ನಾನು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನನ್ನು ನನ್ನ ಪರ ಸಾಕ್ಷಿಯನ್ನಾಗಿ ನ್ಯಾಯಾಲಯಕ್ಕೆ ಕರೆ ತರಲು ನನ್ನದೇನು ಅಭ್ಯಂತರ ಇಲ್ಲ.

ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಅಸ್ತಿಯನ್ನು ಕೊಡಬೇಕಾದರೆ ದಾನಪತ್ರ ಅಥವಾ ವಿಭಾಗ ಪತ್ರದ ಮುಖಾಂತರ ಅಸ್ತಿಯನ್ನು ಕೊಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ನ್ಯಾಯಾಲಯವು ಪ್ರಶ್ನೆಯನ್ನು ಹಾಕಿದ್ದು ಹೆಣ್ಣು ಮಕ್ಕಳಿಗೆ ಬೇರೆ ರೂಪದಲ್ಲಿಯೂ ಸಹಾ ಅಸ್ತಿಯನ್ನು ಕೊಡಬಹುದು ಎಂದರೆ ಸರಿ.

ಬೇರೆ ರೂಪದಲ್ಲಿ ಅಸ್ತಿಯನ್ನು ಕೊಡಬಹುದು ಎಂದರೆ ಯಾವ ರೀತಿ ಎಂದರೆ ಸಾಕ್ಷಿಯು ನಾನು ನನ್ನ ಅಕ್ಕನಿಗೆ ಕೊಟ್ಟ ಹಾಗೆ ಎಂದು ನುಡಿಯುತ್ತಾರೆ.

ನೀವು ನಿಮ್ಮ ಅಕ್ಕನಿಗೆ ಅಸ್ತಿಯನ್ನು ಪ್ರೀತಿ ವಿಶ್ವಾಸದಿಂದ ಕೊಟ್ಟಿದ್ದಿರಾ ಅಥವಾ ಕ್ರಯದ ಮುಖಾಂತರ ಕೊಟ್ಟಿದ್ದಿರಾ ಎಂದರೆ ಸಾಕ್ಷಿಯು ಪ್ರೀತಿ ವಿಶ್ವಾಸದಿಂದ ಕೊಟ್ಟಿದ್ದು ನಂತರ ಕ್ರಯ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಡಿ-9 ರಲ್ಲಿ ಕ್ರಯದ ಮೊಬಲಗು ಎಷ್ಟು ಎಂದು ನನಗೆ ಗೊತ್ತಿಲ್ಲ. ಆ ಹಣವನ್ನು ನಾನು ಪಡೆದುಕೊಂಡಿಲ್ಲ. ನಿಡಿ-9 ಅನ್ನು ನಾವೇ ಸೃಷ್ಟಿ ಮಾಡಿಕೊಂಡಿರುತೆವೆ ಎಂದರೆ ಸರಿಯಲ್ಲ. 3 ನೇ ವ್ಯಕ್ತಿಗೆ ಅಸ್ತಿಯನ್ನು ಮಾರಾಟ ಮಾಡಿದರೆ ಅಸ್ತಿಯ ಸ್ವಾದೀನವನ್ನು ಕೊಡಬೇಕಾಗುತ್ತದೆಂಬ ಉದ್ದೇಶದಿಂದ, ನಮ್ಮ ನಮ್ಮಲ್ಲಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೆವೆ ಎಂದರೆ ಸರಿಯಲ್ಲ ದಾವಾ ಅಸ್ತಿಯಲ್ಲಿ 6 ನೇ ಪ್ರತಿವಾದಿಯು ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ನನ್ನ ಅಕ್ಕ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

1 ರಿಂದ 5 ನೇ ಪ್ರತಿವಾದಿಗೆ ಈಗಿರುವ ಬಿ.ಅರ್.ಎಸ್. ವಕೀಲರು ಅಸಲು ದಾವಾ ಸಂಖ್ಯೆ 84/2000 ರಲ್ಲಿ ವಾದಿ ಪರ ವಕೀಲರು ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದೆನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖೆ 84/2000 ರ ಮೇಲೆ ಸಲ್ಲಿಸಿದ ಮೇಲ್ಮನವಿ ಹಿರಿಯ ಸಿವಿಲ್ ನ್ಯಾಯಾಲಯ ಚಿಂತಾಮಣಿಯಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ.

ನನ್ನ ತಂದೆಯು ಸಹಿ ಮಾಡುತ್ತಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಡಿ-10 ನ್ನು ತೊರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ತಂದೆಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯವು ಸದರಿ ದಾಖಲೆ ಯನ್ನು ಪರಿಶೀಲಿಸಲಾಗಿ ಸಾಕ್ಷಿಯ ಸಹಿಯು ಸರಿಯಾಗಿ ಕಾಣದೆ ಇರುವ ಕಾರಣ ನಿಶಾನೆಯಾಗಿ ಗುರುತಿಸಲು ಅಗುವುದಿಲ್ಲ. ದಾಸಮ್ಮ ಮತ್ತು ಚನ್ನಪ್ಪ ರವರು ನನ್ನ ತಂದೆಗೆ ಕ್ರಯ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ನಿಡಿ-10 ಅನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎದುರಡಿಯನ್ನು ಬರೆದುಕೊ ಟ್ಟಿಲ್ಲ ಎಂದರೆ ಸರಿಯಲ್ಲ .

ದಾವಾ ಅಸ್ತಿಯಲ್ಲಿ 6 ನೇ ಪ್ರತಿವಾದಿ ಮತ್ತು ಕುಟುಂಬದವರು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷವನ್ನು ನಡಿಯುತ್ತಿದೆನೆ ಎಂದರೆ ಸರಿಯಲ್ಲ.

ದಾವಾ ಅಸ್ತಿ ಐಟಂ.ನಂ. 1 ರಲ್ಲಿ ಕೋಳಿ ಪಾರಂ ಇದೆಯಾ ಅಥವಾ ಇಲ್ಲವಾ ಎಂದು ತೋರಿಸಲು ಕೋರ್ಟ್ ಕಮೀಶನರ್ ರವರನ್ನು ನೇಮಕ ಮಾಡಲು ನನ್ನದೇನು ತಕರಾರು ಇಲ್ಲ .

ಮರು ವಿಚಾರಣೆ ಇಲ್ಲಃ-

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ಶ್ರೀಮತಿ. ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.